**ಕರ್ನಾಟಕ ಸರ್ಕಾರ**
**ಜಿಲ್ಲಾ ಕೌಶಲ್ಯಾಭಿವೃದ್ಧಿ ಕಛೇರಿ,ಬಳ್ಳಾರಿ**

ಸಂಖ್ಯೆ: ಜಿಕೌಕಬ/ತರಬೇತಿ-2/2024-25 ದಿನಾಂಕ: .09.2024

# ಅಧಿಸೂಚನೆ

| | |
|---|---|
| ವಿಷಯ: | ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಯೋಜನೆಯಡಿ ಬಳ್ಳಾರಿ ಜಿಲ್ಲೆಯ ಅರ್ಹ ಅಭ್ಯರ್ಥಿಗಳಿಗೆ ಉಚಿತ "ಟ್ಯಾಲಿ" (ಕಂಪ್ಯೂಟರ್) ತರಬೇತಿ ನೀಡಲು ಉದ್ದೇಶಿಸಿದ್ದು, ಸದರಿ ತರಬೇತಿಯನ್ನು ಪಡೆಯಲು Online ಅರ್ಜಿ ಸಲ್ಲಿಸುವ ಕುರಿತು. |
| ಉಲ್ಲೇಖ: | ಮಾನ್ಯ ಜಿಲ್ಲಾಧಿಕಾರಿಗಳ ಹಾಗೂ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್, ಬಳ್ಳಾರಿಯವರ ನಿರ್ದೇಶನದ ದಿನಾಂಕ:13.09.2024. |

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಆದೇಶದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ಬಳ್ಳಾರಿ ಹಾಗೂ ಮಾನ್ಯ ಮುಖ್ಯ ಕಾರ್ಯನಿರ್ವಾಹಕರು, ಜಿಲ್ಲಾ ಪಂಚಾಯತ್,ಬಳ್ಳಾರಿರವರು ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಕ್ರಿಯಾ ಯೋಜನೆಯಡಿಯಲ್ಲಿ ಬಳ್ಳಾರಿ ಜಿಲ್ಲೆಯ ಅರ್ಹ ಅಭ್ಯರ್ಥಿಗಳಿಗೆ "ಟ್ಯಾಲಿ" (ಕಂಪ್ಯೂಟರ್) ಉಚಿತ ತರಬೇತಿಯನ್ನು ನೀಡಲು ಅನುಮೋದನೆಯನ್ನು ನೀಡಿರುತ್ತಾರೆ. ಪ್ರಯುಕ್ತ ಬಳ್ಳಾರಿ ಜಿಲ್ಲೆಯ ಅರ್ಹ 200 ಅಭ್ಯರ್ಥಿಗಳಿಗೆ "ಟ್ಯಾಲಿ" (ಕಂಪ್ಯೂಟರ್) ಬಳ್ಳಾರಿ ಜಿಲ್ಲಾ ಕೇಂದ್ರದಲ್ಲಿ 2 ತಿಂಗಳು ಉಚಿತ ತರಬೇತಿಯನ್ನು ನೀಡಲು ಉದ್ದೇಶಿಸಿದ್ದು, ಅದರಂತೆ ಅರ್ಹ 200 ಅಭ್ಯರ್ಥಿಗಳನ್ನು ಆಯ್ಕೆ ಮಾಡಲು NIC ಮೂಲಕ Online ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರಮ ಸಂ | ವಿಷಯ | ಒಟ್ಟು ಸಂಖ್ಯೆ |
|---|---|---|
| 1 | ಬಳ್ಳಾರಿ ಜಿಲ್ಲೆಯ ಅರ್ಹ ಅಭ್ಯರ್ಥಿಗಳಿಗೆ "ಟ್ಯಾಲಿ" (ಕಂಪ್ಯೂಟರ್) ಉಚಿತ ತರಬೇತಿ ನೀಡುವ ಕುರಿತು. | 200 |

| | |
|---|---|
| ಅರ್ಜಿ ಸಲ್ಲಿಸಲು ನಿಗದಿ ಪಡಿಸಿದ ಪ್ರಾರಂಭ ದಿನಾಂಕ | 20.09.2024 (10.00 A.M) |
| ಅರ್ಜಿ ಸಲ್ಲಿಸಲು ನಿಗಧಿ ಪಡಿಸಿದ ಕೊನೆಯ ದಿನಾಂಕ | 26.09.2024 (05.00 P.M) |

1. **ವಿಶೇಷ ಸೂಚನೆ :-**
   ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವ ಮೊದಲು ಎಲ್ಲಾ ವಿವರಗಳನ್ನು ಓದಿ ಅರ್ಥೈಸಿಕೊಂಡು ಆನಂತರವೇ ತಮಗೆ ಅನ್ವಯವಾಗುವ ವಿವರಗಳನ್ನು ಭರ್ತಿ ಮಾಡತಕ್ಕದ್ದು.
2. **ಶುಲ್ಕ:-**
   ಅರ್ಜಿಯನ್ನು ಸಲ್ಲಿಸಲು ಯಾವುದೇ ಶುಲ್ಕ ಇರುವುದಿಲ್ಲ.
3. **ಅರ್ಹತಾ ಷರತ್ತುಗಳು :-**
   ಅರ್ಜಿಯನ್ನು ಸಲ್ಲಿಸಲು ಉದ್ದೇಶಿಸುವ ಅಭ್ಯರ್ಥಿಗಳು ಬಳ್ಳಾರಿ ಜಿಲ್ಲೆಯ ನಿವಾಸಿಯಾಗಿರತಕ್ಕದ್ದು

4. **ಶೈಕ್ಷಣಿಕ ವಿದ್ಯಾರ್ಹತೆ :-**

ಅರ್ಜಿಯನ್ನು ಸಲ್ಲಿಸುವ ಅಭ್ಯರ್ಥಿಗಳು ಕಾನೂನಿನಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಬಿ,ಕಾಂ ಪದವಿಯನ್ನು ಪಡೆದಿರತಕ್ಕದ್ದು.

5. **ವಯೋಮಿತಿ :-**

ಅಭ್ಯರ್ಥಿಯ ವಯೋಮಿತಿ ದಿನಾಂಕ 01.09.2024 ಕ್ಕೆ ಕನಿಷ್ಠ 21 ವರ್ಷದಿಂದ ಗರಿಷ್ಠ 35 ವರ್ಷದ ವರೆಗೆ.

6. **ಆಯ್ಕೆ ವಿಧಾನ :-**

- ಉಚಿತ ತರಬೇತಿಯನ್ನು ನೀಡಲು ಉದ್ದೇಶಿಸಿದ 200 ಅಭ್ಯರ್ಥಿಗಳನ್ನು ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತದೆ.
- ಮೆರಿಟ್ ಆಧಾರದ ಮೇಲೆ ಆಯ್ಕೆಯಾದ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು https://ballari.nic.in Websiteನಲ್ಲಿ Upload ಮಾಡಲಾಗುವುದು.

7. **ಸಂಪರ್ಕ**

ದೂರವಾಣಿ ಸಂಖ್ಯೆ

- +919844444958/+919964502514
- 08392-294230

ಸಹಿ/-
(ಪ್ರಣೇಶ್)
ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳು,
ಜಿಲ್ಲಾ ಕೌಶಲ್ಯಾಭಿವೃದ್ಧಿ ಕಛೇರಿ,
ಬಳ್ಳಾರಿ

ಪ್ರತಿಯನ್ನು:

1) ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿರವರಿಗೆ ಮಾಹಿತಿಗಾಗಿ.
2) ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್, ಬಳ್ಳಾರಿರವರಿಗೆ ಮಾಹಿತಿಗಾಗಿ.